ನಾವು ಮಾನವವರ್ಗಕ್ಕೆ ಸೇರಿದವರು ಎಂಬುದನ್ನು ಅವರು ಮರೆತಿರುವರು. ಇದರ ಪರಿಣಾಮವೇ ಗುಲಾಮಗಿರಿ" ಎಂದು ನೊಂದು ಬೆಂದು ತಮ್ಮ ಹೃದಯಾಂತರಾಳದಿಂದ, "ನನ್ನ ಗುರಿ ಪರಮಹಂಸರೂ ಅಲ್ಲ, ವೇದಾಂತವೂ ಅಲ್ಲ 'ಸಮಷ್ಟಿ' " ಎನ್ನುತ್ತಾರೆ ವಿವೇಕಾನಂದರು. ಇದಲ್ಲದೆ ಅಮೆರಿಕದ ವಿಶ್ವಸರ್ವಧರ್ಮ ಸಮ್ಮೇಳನಕ್ಕೆ ಹೋಗುವುದಕ್ಕೆ ಮುಂಚೆ, "ನಾನು ಜನರು ಹಾಗೂ ಬಡವರ ಪರವಾಗಿ ಹೋಗುತ್ತಿದ್ದೇನೆ" ಎಂದು ದೀನದಲಿತರ ಬಗ್ಗೆ ತಮ್ಮ ತುಡಿತ ಮಿಡಿತಗಳನ್ನು ವ್ಯಕ್ತಪಡಿಸುತ್ತಾರೆ.

ವಿವೇಕಾನಂದರು ಆಲ್ಮೋರದಿಂದ ಜುಲೈ ೨೦, ೧೮೯೭ ರಂದು ಸ್ವಾಮಿ ಬ್ರಹ್ಮಾನಂದರಿಗೆ ಒಂದು ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ, "ಪೂಜೆಯ ಖರ್ಚನ್ನು ತಿಂಗಳಿಗೆ ಎರಡು ರೂಪಾಯಿಗಳಿಗೆ ಇಳಿಸು. ದೇವರ ಮಕ್ಕಳು ಉಪವಾಸದಿಂದ ನರಳುತ್ತಿರುವರು. ನೀರು ಮತ್ತು ತುಳಸಿದಳದಿಂದ ಮಾತ್ರ ಪೂಜಿಸು. ದೇವರ ನೈವೇದ್ಯಕ್ಕೆ ಕೊಡುವ ಹಣವನ್ನು ದೀನರಲ್ಲಿರುವ ಜೀವಂತ ದೇವರಿಗೆ ಆಹಾರವನ್ನು ನೈವೇದ್ಯ ಮಾಡುವುದಕ್ಕೆ ವ್ಯಯಮಾಡು" ಎಂದಿರುವ ಮಾತಿನಲ್ಲಿಯೂ ಅವರ ಸಮಾಜವಾದಿ ಸಿದ್ಧಾಂತದ ಬೇರುಗಳಿವೆ.

ವಿವೇಕಾನಂದರು ಬ್ರಿಟಿಷ್ ಅಥವಾ ಅಮೆರಿಕ ಪ್ರಜಾಪ್ರಭುತ್ವವನ್ನು ಮೆಚ್ಚಿಕೊಂಡವರಲ್ಲ. 'ಜನರ, ಜನರಿಂದ, ಜನರಿಗಾಗಿ ಪ್ರಜಾಪ್ರಭುತ್ವ ಸರ್ಕಾರ' ಎನ್ನುವ ಅಮೆರಿಕ ಸಂವಿಧಾನವನ್ನು ಆಧುನಿಕ ಭಾರತಕ್ಕೆ ಹೋಲಿಸಿ ಹೇಳುವಾಗಲೂ ಅವರ ಸ್ಪಷ್ಟ ಉದ್ಗಾರವೆಂದರೆ, "ಸಾಂವಿಧಾನಿಕ ಸರ್ಕಾರಗಳು ಹೇಳುವ ಸ್ವಾತಂತ್ರ್ಯ, ಬಿಡುಗಡೆ ಹಾಗೂ ಲೋಕಸಭೆಗಳು – ಇವೆಲ್ಲಾ ಹಾಸ್ಯಾಸ್ಪದ" ಎಂದೇ. ಏಕೆಂದರೆ, ವಿವೇಕಾನಂದರ ಸಮಾಜವಾದ ಪಾಶ್ಚಾತ್ಯ ರಾಷ್ಟ್ರಗಳ ಸಿದ್ಧಾಂತಗಳಂತಲ್ಲ. ಅವರದು ಮನುಷ್ಯನಲ್ಲಿ ಹುದುಗಿರುವ ದೈವತ್ವದ ನೆಲೆಯನ್ನು ಅನ್ವೇಷಿಸುವ ವೇದಾಂತ ಸಮಾಜವಾದ. ಆದಕಾರಣವೇ ಅವರು ಅಮೆರಿಕದಲ್ಲಿ, "ಭವಿಷ್ಯ ಪ್ರಪಂಚದ ಧರ್ಮ ಎಂದರೆ ವೇದಾಂತ" ಎಂದು ಸಾರಿದರು.

ವೇದಾಂತ ಎಂದರೆ ವೇದಗಳ ಕಡೆಯಲ್ಲಿ ಬಂದ ಉಪನಿಷತ್ತುಗಳು ಎನ್ನುವುದಿದೆ. ಅದಕ್ಕೂ ವ್ಯಾಪಕವಾದ ಅರ್ಥ ಆ ಪದದಲ್ಲಿಯೇ ಅಡಕವಾಗಿದೆ. ವಿದ್ ಎಂದರೆ ತಿಳಿ, ಅಂತ ಎಂದರೆ ಕೊನೆ. ಈ ಸೃಷ್ಟಿಯ ಆದಿ ಅಂತ್ಯಗಳನ್ನು ಅರಿಯುವ ಅನಿರ್ಬಂಧಿತ ಅನ್ವೇಷಣೆಗೆ ಅನುವು ಮಾಡುವ ನೆಲೆಯಾಗಿದೆ ವೇದಾಂತ. ನಿಜವಾದ ಸಮಾಜವಾದ ಎನ್ನುವುದು ವೇದಾಂತದ ಅಸ್ತಿಭಾರದ ಮೇಲೆ ನಿಂತಿರುತ್ತದೆ ಎನ್ನುತ್ತಾರೆ ವಿವೇಕಾನಂದರು.

ಸ್ವಾತಂತ್ರ್ಯ ಎಂದರೆ ಸ್ವೇಚ್ಛೆಯಲ್ಲ, ಜವಾಬ್ದಾರಿ. ಒಂದು ಮಹತ್ವದ ಸಮಾಜ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ತಮ್ಮ ಅಲ್ಪ ಸ್ವಾತಂತ್ರ್ಯವನ್ನು ಬಲಿದಾನ ಮಾಡಬೇಕಾಗುತ್ತದೆ. ಸಮಷ್ಟಿಯ ಹಿತಕ್ಕಾಗಿ ತ್ಯಾಗಮಾಡುವುದು ಸಮಾಜವಾದವಾದರೆ ವ್ಯಕ್ತಿಗಾಗಿ ಪ್ರತಿಪಾದಿಸುವುದು ವ್ಯಕ್ತಿವಾದವಾಗುತ್ತದೆ. ಆಗ ವ್ಯಕ್ತಿಯೇ ಪ್ರಧಾನವಾಗಿ ಸಮಾಜ ಗೌಣವಾಗುತ್ತದೆ ; ಸಮಾನತೆ ಎನ್ನುವುದು ಶೂನ್ಯವಾಗುತ್ತದೆ. ಆ ಕಾರಣಕ್ಕಾಗಿಯೇ ವಿವೇಕಾನಂದರು ಪ್ರತಿಯೊಂದು ವ್ಯಕ್ತಿಯನ್ನೂ ಮತ್ತು ಪ್ರತಿಯೊಂದು ಜನಾಂಗವನ್ನೂ ಏಳಿಗೆಗೆ ತರುವುದಕ್ಕೆ ಮೂರು ವಿಷಯಗಳು ಅತ್ಯವಶ್ಯಕ ಎನ್ನುತ್ತಾರೆ. ಅವೆಂದರೆ, ಸತ್ಯದ ಶಕ್ತಿಯಲ್ಲಿ ದೃಢವಾದ ನಂಬಿಕೆ, ಅಸೂಯೆ ಅನುಮಾನಗಳು ಇಲ್ಲದೆ ಇರುವುದು ಮತ್ತು ಯಾರು ಒಳ್ಳೆಯವರಾಗುವುದಕ್ಕೆ ಮತ್ತು ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನಪಡುವರೋ ಅವರಿಗೆ ಸಹಾಯ ಮಾಡುವುದು. ಈ ಹೇಳಿಕೆಯ ಹಿನ್ನೆಲೆಯಲ್ಲಿ ಸಮಾಜವಾದದ ತಿರುಳಿರುವುದನ್ನು ಕಾಣಬಹುದು.

ವಿವೇಕಾನಂದರ ಚಿಂತನೆ ಮನುಷ್ಯ ಕ್ರಿಯಾಶೀಲನಾಗಿರಬೇಕು ಎನ್ನುವ ನೆಲೆಯದು. ಸಣ್ಣಪ್ರಮಾಣದ ಕೈಗಾರಿಕಾ ಯಂತ್ರಗಳು ಪ್ರಗತಿಗೆ ಪೂರಕ. ಆದರೆ ಎಲ್ಲವನ್ನೂ ಯಂತ್ರವೇ ಮಾಡುವಂತಾದರೆ, ಅದು ಮನುಷ್ಯನ ಕ್ರಿಯಾಶಕ್ತಿಗೆ ಮಾರಕವಾಗಿ ಅಸಮಾನತೆಗೆ ಆಸ್ಪದವಾಗಿ ಬಿಡುತ್ತದೆ. ಆದಕಾರಣವೆ ವಿವೇಕಾನಂದರು ಪುರಾತನ ಕಲೆಗಳನ್ನು ಬಳಕೆಗೆ ತರಬೇಕು ಎಂದು ಪ್ರತಿಪಾದಿಸುತ್ತಾರೆ ; ಮನೆ ಮನೆಯೂ ಯಾಂತ್ರಿಕವಾಗುವ ಅಪಾಯದಿಂದ ನಾವು ಪಾರಾಗಬೇಕೆಂದು ಬಯಸುತ್ತಾರೆ.

ವರ್ಗರಹಿತ ಸಮಾಜ ಹಾಗೂ ವಿಶೇಷ ಮಾನ್ಯತೆರಹಿತ ಸಮಾಜಕ್ಕಾಗಿ, ಎರಡು ತತ್ತ್ವಗಳ ನೆಲೆಯಲ್ಲಿ ವೇದಾಂತ ತತ್ತ್ವವನ್ನು ವಿವೇಕಾನಂದರು ಪ್ರತಿಪಾದಿಸುತ್ತಾರೆ. ಒಂದು ಮನುಷ್ಯನಲ್ಲಿರುವ ದೈವತ್ವ ಹಾಗೂ ಎರಡನೆಯದು ಬದುಕಿಗೆ ಅಗತ್ಯವಾದ ಅಧ್ಯಾತ್ಮ. ಅದರ ಉದ್ದೇಶ, ಪ್ರತಿಯೊಬ್ಬರಲ್ಲಿಯೂ ನಿಸರ್ಗದತ್ತವಾಗಿ ಹುದುಗಿರುವ ದೈವೀಶಕ್ತಿಯನ್ನು ಅನಾವರಣಗೊಳಿಸುವುದು. ಪುರೋಹಿತಶಾಹಿ ವಿಶೇಷ ಮಾನ್ಯತೆ ಪಡೆದ ಶಕ್ತಿಯುಳ್ಳದ್ದಾಗಿದ್ದರೆ, ನಿಜವಾದ ಧರ್ಮ ಆ ವಿಶೇಷ ಮಾನ್ಯತೆಯನ್ನು ಬುಡಮೇಲು ಮಾಡುವ ಶಕ್ತಿಯುಳ್ಳದ್ದು ಎನ್ನುವ ವಿವೇಕಾನಂದರು, ವಿಜ್ಞಾನ, ಕಲೆ ಹಾಗೂ ಧರ್ಮ ಇವು ಒಂದೇ ಸತ್ಯದ ವಿವಿಧ ಮುಖಗಳು ಎನ್ನುತ್ತಾರೆ. ವಿವೇಕಾನಂದರು ನಿಜವಾದ ಧರ್ಮದ ಮೂಲಕ್ಕೆ ಹೋಗಿ, "ಧರ್ಮ ದೇವಸ್ಥಾನ ಕಟ್ಟುವುದರಲ್ಲಿಲ್ಲ ಅಥವಾ ಸಾಮೂಹಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ; ಅದು ಗ್ರಂಥದಲ್ಲಿಲ್ಲ, ಮಾತಿನಲ್ಲಿಯೂ ಇಲ್ಲ, ಉಪವಾಸದಲ್ಲಿಯೂ ಇಲ್ಲ ಅಥವಾ ಸಂಸ್ಥೆಯಲ್ಲಿಯೂ ಇಲ್ಲ. ಧರ್ಮವೆಂದರೆ ಸಾಕ್ಷಾತ್ಕಾರ. ಒಂದು ಕಣದಷ್ಟು ಧರ್ಮಾನುಷ್ಠಾನ ಮತ್ತು ಆತ್ಮಸಾಕ್ಷಾತ್ಕಾರ ಒಂದು ಮಣ ಮಾತಿಗಿಂತ ಮತ್ತು ಒಣ ಹೆಮ್ಮೆಗಿಂತ ಮೇಲು" ಎಂಬ ಜೀವಂತ ಸತ್ಯವನ್ನು ಪ್ರತಿಪಾದಿಸುತ್ತಾರೆ. ಆ ಕಾರಣಕ್ಕಾಗಿಯೇ ಮೊದಲು ನೈತಿಕ ಹಾಗೂ ಆಧ್ಯಾತ್ಮಿಕ ಕ್ರಾಂತಿ, ಆನಂತರ ಸಾಮಾಜಿಕ ಕ್ರಾಂತಿಯ ಮೂಲಕ ವಿಶೇಷ ಮಾನ್ಯತೆ ಹೊಂದಿರುವ ವರ್ಗಗಳ ನಾಶ ಎನ್ನುವ ವಿವೇಕಾನಂದರು, ಅದಕ್ಕೆ ಮೂಲಭೂತವಾಗಿ ಬೇಕಾಗಿರುವುದು ಸತ್ವ ತುಂಬಿದ ವಿದ್ಯೆ ಎಂದು ಹೇಳುತ್ತಾರೆ.

"ಯಾವ ವಿದ್ಯೆಯಿಂದ ನಾವು ಗುಣವಂತರಾಗಬಲ್ಲೆವೊ, ಯಾವುದರಿಂದ ಮನಸ್ಸಿನ ಶಕ್ತಿ ಹೆಚ್ಚಾಗಬಲ್ಲದೋ, ಧೀಶಕ್ತಿ ವೃದ್ಧಿಸಬಲ್ಲದೋ ಹಾಗೂ ಯಾವುದರಿಂದ ನಾವು (ಪರಾವಲಂಬಿಗಳಾಗದೆ) ನಮ್ಮ ಕಾಲ ಮೇಲೆ ನಿಲ್ಲಬಲ್ಲವರಾಗುವೆವೋ ಅಂತಹ ವಿದ್ಯೆ ನಮಗೆ ಬೇಕು" ಎನ್ನುವ ವಿವೇಕಾನಂದರು, ತಮ್ಮ ಇಡೀ ಜೀವಿತದುದ್ದಕ್ಕೂ ಪ್ರತಿಪಾದಿಸಿದ್ದು, 'ಮನುಷ್ಯ ನಿರ್ಮಾಣ' (Man Making) ಮಾಡಬಲ್ಲ ವಿದ್ಯೆ ಹಾಗೂ ಧರ್ಮವನ್ನು. ಮನುಷ್ಯ ನಿರ್ಮಾಣವಾದರೆ

ಸಮಾಜವಾದ ಸಾಕ್ಷಾತ್ಕಾರವಾಗುತ್ತದೆ ಎನ್ನುವುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಇದರಲ್ಲಿ ಎರಡು ಮಾತಿಲ್ಲ.

ಭಾರತ ಉಸಿರಾಡುತ್ತಿರುವುದು ಶ್ರೀಮಂತರ ಹಣದಿಂದಲ್ಲ, ಬಡವರ ಬೆವರಿನಿಂದ ಎನ್ನುವ ಒಳನೋಟ ವಿವೇಕಾನಂದರದು. ಶೋಷಣೆಯನ್ನೇ ಆತ್ಮವಾಗಿರಿಸಿಕೊಂಡಿರುವ ಶ್ರೀಮಂತವರ್ಗ ಬದುಕಿರುವುದಕ್ಕಿಂತ ಜೀವಂತ ಶವವಾಗಿದ್ದಾರೆ. ಆದ್ದರಿಂದ ಭಾರತಕ್ಕೆ ಭರವಸೆ ಇರುವುದು ಕಾಯಕದಲ್ಲಿ ನಿರತವಾಗಿ ಬೆವರು ಬಸಿಯುತ್ತಿರುವ ಸಮಷ್ಟಿಯಿಂದ ಮಾತ್ರ ಎಂದು ಸ್ವಾಮೀಜಿ ಸಾರಿದರು. ಆದಕಾರಣವೇ, **"ವಿಧವೆಯರ ದುಃಖವನ್ನು ಶಮನ ಮಾಡದ, ಅನಾಥರ ಬಾಯಿಗೆ ಒಂದು ತುತ್ತು ಅನ್ನವನ್ನು ಕೊಡದ ಧರ್ಮದಲ್ಲಾಗಲೀ, ದೇವರಲ್ಲಾಗಲೀ, ನನಗೆ ನಂಬಿಕೆಯಿಲ್ಲ"** ಎನ್ನುವ ವಿವೇಕಾನಂದರು, **"ದರಿದ್ರರೆನ್ನ ದೇವರು, ಮೂರ್ಖರೆನ್ನ ದೇವರು, ಪತಿತರೆನ್ನ ದೇವರು, ದುಃಖಿಗಳೆನ್ನ ದೇವರು, ಅಜ್ಞಾನಿಗಳೆನ್ನ ದೇವರು"** ಎಂದು ಕರೆದು ಆರಾಧಿಸಿದ್ದಾರೆ. ಅವರ ಹೃದಯ ಅನುಕಂಪದ ಕಡಲಾಗಿತ್ತು. ಪತಿತರ ಉದ್ಧಾರಕ್ಕಾಗಿ ತಮ್ಮ ಇಡೀ ಬದುಕನ್ನು ಹಗಲಿರುಳೆನ್ನದೆ ಅವರು ತೇಯ್ದರು. ಎಲ್ಲ ರೀತಿಯ ಸಾಮಾಜಿಕ ಅಸಮಾನತೆಗೆ ಪುರೋಹಿತಶಾಹಿ ಹಾಗೂ ಭೂಮಾಲೀಕರು ಕಾರಣರಾಗಿದ್ದಾರೆ, ಅವರ ಉಪಟಳದಿಂದ ಸಮಷ್ಟಿ ಸಂಕಷ್ಟದಲ್ಲಿ ಸಿಲುಕಿರುವುದನ್ನು ಕಂಡು, **"ಪುರೋಹಿತಶಾಹಿಯ ಉಪಟಳವಲ್ಲ, ಸಾಮಾಜಿಕ ಶೋಷಣೆಯಲ್ಲ, ಹೆಚ್ಚು ಅನ್ನ ಹಾಗೂ ಪ್ರತಿಯೊಬ್ಬರಿಗೂ ಹೆಚ್ಚಿನ ಅವಕಾಶ"** ಎಂದು ಸ್ವಾಮೀಜಿ ತೂರ್ಯಧ್ವನಿಯಲ್ಲಿ ಸಾರಿದರು.

ಭಾರತದ ಕಿಲುಬು ಎಲ್ಲಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಂಡವರು ವಿವೇಕಾನಂದರು. ಶೋಷಣೆಯನ್ನೇ ಆತ್ಮವಾಗಿರಿಸಿಕೊಂಡಿರುವ ಮೇಲ್ವರ್ಗವನ್ನು ಕುರಿತು ಅವರು ಹೀಗೆ ಹೇಳಿದ್ದಾರೆ: **"ಪುರಾತನ ಆರ್ಯ ಮಹರ್ಷಿಕುಲ ಸಂಭೂತರೆಂದು ನೀವೆನಿತು ಹಿಗ್ಗಿದರೂ, ಪುರಾತನ ಆರ್ಯಾವರ್ತದ ಮಹಿಮೆಯನ್ನು, ಗೌರವವನ್ನು ನೀವೆನಿತು ಕೀರ್ತಿಸಿದರೂ, ಉಚ್ಚಕುಲಪ್ರಸೂತರೆಂದು ನೀವೆನಿತು ಉಬ್ಬಿದರೂ, ಆರ್ಯಾವರ್ತದಲ್ಲಿ ಉತ್ತಮ ವರ್ಗದವರು ಎನಿಸಿಕೊಂಡಿರುವ ನೀವೆಲ್ಲ ಜೀವಂತರೆಂದು ತಿಳಿದಿರುವಿರೇನು? ನೀವೆಲ್ಲ ಹೆಣಗಳಾಗಿದ್ದೀರಿ, ಶತಶತಮಾನಗಳ ಶವಗಳಾಗಿದ್ದೀರಿ. ಯಾರನ್ನು ನಿಮ್ಮ ಪೂರ್ವಿಕರು ಚಲಿಸುತ್ತಿರುವ ಸ್ಮಶಾನಗಳೆಂದು ತಿರಸ್ಕರಿಸಿದರೋ, ಅವರಲ್ಲಿ ಮಾತ್ರ ಭರತವರ್ಷದ ಪ್ರಾಣ ಸ್ವಲ್ಪವಾದರೂ ಇನ್ನೂ ಸಂಚರಿಸುತ್ತಿದೆ.... ಸ್ವಪ್ನಲೋಕದ ಛಾಯಾ ಮೂರ್ತಿಗಳಿರಾ, ಏಕಿನ್ನೂ ಉಳಿದಿರುವಿರಿ... ನಿಮ್ಮ ಸ್ಥಾನದಲ್ಲಿ ನವೀನ ಭಾರತವೇಳಲಿ. ಕೃಷಿಕನ ದರಿದ್ರ ನಿವಾಸದಿಂದ ನೇಗಿಲನ್ನು ಹಿಡಿದ ನವೀನ ಭಾರತಾಂಬೆ ಮೈದೋರಲಿ, ಬೆಸ್ತನ ಜೋಪಡಿಯಿಂದಾಕೆ ಮೂಡಲಿ. ಮಳಿಗೆಗಳಿಂದ, ಕಾರ್ಖಾನೆಗಳಿಂದ, ಸಂತೆಯಿಂದ, ಆಕೆ ಪ್ರತ್ಯಕ್ಷವಾಗಲಿ"** – ಹೀಗೆ ಶೋಷಕರಹಿತ ಹಾಗೂ ಶೋಷಣಾರಹಿತ ಸಮಾಜಕ್ಕಾಗಿ ಹಾಗೂ ಸಮಾನತೆಗಾಗಿ ಸ್ವಾಮೀಜಿ ಹೃದಯತುಂಬಿ ಹಂಬಲಿಸುತ್ತಾರೆ.

ಒಟ್ಟಿನಲ್ಲಿ, **"ನನ್ನ ಇಡೀ ಜೀವಿತದ ಉದ್ದೇಶ ವ್ಯಕ್ತಿ ನಿರ್ಮಾಣ"** ಎಂದ ವಿವೇಕಾನಂದರು, ವ್ಯಕ್ತಿ ತನ್ನಲ್ಲೇ ಹುದುಗಿರುವ ದೈವೀ ಶಕ್ತಿಯನ್ನು ಜಾಗೃತಗೊಳಿಸಿಕೊಂಡಾಗ ಮಾತ್ರ ಸಮಾಜವು ಶೋಷಣೆಯಿಂದ ಮುಕ್ತವಾಗಿ, ಪರಸ್ಪರ ಪ್ರೀತಿಯಿಂದ ನೈಜವಾದ ಸ್ವಾತಂತ್ರ್ಯದ ನೆಲೆಯಲ್ಲಿ ಬದುಕಲು ಸಾಧ್ಯವಾಗುತ್ತದೆ ಎನ್ನುವ ಮುಂಗಾಣ್ಕೆಯನ್ನು ನೀಡಿದ್ದಾರೆ. ಭಾರತ ಎದುರಿಸುತ್ತಿರುವ ಇಂದಿನ ಎಲ್ಲ ಸಂಕಷ್ಟಗಳಿಗೆ ಸ್ವಾತಂತ್ರ್ಯ ಎಂದರೆ ಸ್ವೇಚ್ಛೆ ಎಂದು ತಿಳಿದಿರುವ ಮನಸ್ಥಿತಿಯೇ ಕಾರಣವಾಗಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ 'ದೈವತ್ವ' ಹೃದಯದಲ್ಲಿ ಜಾಗೃತವಾದಾಗಲೇ ಭಾರತಕ್ಕೆ ಶಕ್ತಿ, ಮುಕ್ತಿ. ಇಲ್ಲವಾದಲ್ಲಿ ನಿಜವಾದ ಸಮಾಜವಾದವು ಮರೀಚಿಕೆಯೇ ಸರಿ.

## ವಿವೇಕಾನಂದರ ಅಮೃತಸಿಂಚನ ನನ್ನನ್ನು ಕಾಪಾಡಿ ಮನುಷ್ಯನನ್ನಾಗಿ ಮಾಡಿತು !

**ಶ್ರೀರಾಮಕೃಷ್ಣ ಪರಮಹಂಸರಿಂದ ಮತ್ತು ಸ್ವಾಮಿ ವಿವೇಕಾನಂದರಿಂದ ಅದೆಷ್ಟು ಜನ ಪ್ರಭಾವಿತರಾಗಿ ತಮ್ಮ ಜೀವನವನ್ನು ರೂಪಿಸಿಕೊಂಡು ಸಾರ್ಥಕ ಬಾಳ್ವೆಯನ್ನು ನಡೆಸಿದರೋ, ನಡೆಸುತ್ತಿದ್ದಾರೋ ಬಲ್ಲವರಾರು?! ಅವರುಗಳಲ್ಲಿ ನಾನೂ ಒಬ್ಬ. ಅದು ೧೯೫೬–೫೭ನೇ ಇಸವಿ. ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ, ಆದರೆ ನನ್ನ ದುರದೃಷ್ಟದಿಂದ ಕಾರಣಾಂತರದಿಂದ ಮಾನಸಿಕ ದೃಢತೆಯನ್ನು ಕಳೆದುಕೊಂಡು ಅಧೀರನಾದೆ; ಓದೂ ಕೂಡ ಬೇಡವಾಯಿತು; ಮನಸ್ಸು ಕ್ಷೋಭೆಯಿಂದ ಕಂಗಾಲಾಯಿತು. ಅಂತಹ ದಾರುಣಸ್ಥಿತಿಯಲ್ಲಿ ಇದ್ದಾಗ ದಿವ್ಯಚೇತನ ಸ್ವಾಮಿ ವಿವೇಕಾನಂದರ ಅಮೃತಸಿಂಚನ ನನ್ನನ್ನು ಕಾಪಾಡಿ ನಿಜವಾದ ಮನುಷ್ಯನನ್ನಾಗಿ ಮಾಡಿತು. ಅದು ನಿಜವಾಗಲೂ ಅದ್ಭುತ !**

**ಅದು ನಡೆದಿದ್ದು ಹೀಗೆ : ಅದೇ ವರ್ಷ ನಮಗೆ ಸ್ವಾಮೀಜಿಯವರ 'ಕೊಲಂಬೋ ಇಂದ ಆಲ್ಮೋರಾಕೆ' ಅನ್ನುವ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಇಟ್ಟಿದ್ದರು. ಅದನ್ನು ಬೋಧಿಸುತ್ತಿದ್ದವರು ಮಹಾವಿದ್ವಾಂಸರಾದ ಡಿ.ಎಲ್ ನರಸಿಂಹಾಚಾರ್ಯರು. ಅಲ್ಲಿ ಬರುವ "ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ" ಎಂಬ ವಿವೇಕಾನಂದರ ವೀರವಾಣಿ ನನ್ನ ಮೇಲೆ ಅತ್ಯಂತ ಪ್ರಭಾವವನ್ನು ಬೀರಿತು. ಅಲ್ಲದೇ ಶ್ರೀಯುತ ವಿದ್ವಾನ್ ಡಿ. ಎಲ್ ನರಸಿಂಹಾಚಾರ್ಯರು ಬೋಧಿಸಿದ 'ಉದ್ಧರೇತ್ ಆತ್ಮನಾತ್ಮಾನಂ' – 'ಒಬ್ಬನು ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಬೇಕು' ಅನ್ನುವ ಭಗವದ್ಗೀತೆಯ ಮಹಾವಾಕ್ಯ ನನ್ನನ್ನು ಬಡಿದೆಬ್ಬಿಸಿತು.**

**ಅದೇ ವರ್ಷ, ಅಂದರೆ ೧೯೫೭ರಲ್ಲಿ, ರಾಮಕೃಷ್ಣ ಮಠದ ಸ್ವಾಮಿಗಳಾಗಿದ್ದ ಸ್ವಾಮಿ ಸೋಮನಾಥಾನಂದಜಿಯವರ ಹಿತವಚನವನ್ನು ಕಾಲೇಜಿನಲ್ಲಿ ಏರ್ಪಡಿಸಿದ್ದರು. ಅವರ ಪ್ರವಚನ ನನ್ನ ಮೇಲೆ ಪರಿಣಾಮ ಮಾಡಿತು; ನನ್ನಲ್ಲಿ ಧೈರ್ಯ ತುಂಬಿತು. ಆಮೇಲೆ, ಸ್ವಾಮಿ ವಿವೇಕಾನಂದರ ಕರ್ಮಯೋಗ, ಜ್ಞಾನಯೋಗ ಮುಂತಾದ ಪುಸ್ತಕಗಳನ್ನು ಓದಿದೆ. ಅನಂತರ ೧೯೬೫ರಲ್ಲಿ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಎರಡು ತಿಂಗಳ ಕಾಲ ಪೂಜ್ಯ ಸ್ವಾಮಿ ಹರ್ಷಾನಂದಜಿ, ಪೂಜ್ಯ ಸ್ವಾಮಿ ಜಗದಾತ್ಮಾನಂದಜಿ ಮತ್ತು ಪೂಜ್ಯ ಸ್ವಾಮಿ ವೀತಮೋಹಾನಂದಜಿ ಅವರ ಸಾನ್ನಿಧ್ಯದಲ್ಲಿರುವ ಸುಯೋಗ ದೊರೆಯಿತು. ಹೆಚ್ಚಿಗೆ ಹೇಳುವುದೇನೂ ಇಲ್ಲ. ರಾಮಕೃಷ್ಣ ಆಶ್ರಮದ ದಿವ್ಯಚೇತನಗಳೆಲ್ಲಾ ನನಗೆ ಪ್ರಾತಃಸ್ಮರಣೀಯರು. ಅವರೆಲ್ಲರಿಗೂ ನನ್ನ ಅನಂತಾನಂತ ಪ್ರಣಾಮಗಳು.** – ಕೆ. ನರಹರಿಶಾಸ್ತ್ರಿ, ಅಕ್ಕಿಹೆಬ್ಬಾಳು

# ಸ್ವಾಮಿ ವಿವೇಕಾನಂದರನ್ನು ಶ್ರೀಮಾತೆಯವರು ಕಂಡ ಬಗೆ

ಡಾ. ಕೆ.ಎಲ್. ಪ್ರಸನ್ನಾಕ್ಷಿ

**ಸ್ವಾಮಿ ವಿವೇಕಾನಂದರ ವ್ಯಕ್ತಿವಿಶೇಷವನ್ನೂ, ಅವರ ಕಾರ್ಯದ ಮಹತ್ವವನ್ನೂ ಪೂರ್ಣವಾಗಿ ಅರ್ಥಮಾಡಿಕೊಂಡ ಕೆಲವೇ ಕೆಲವರಲ್ಲಿ ಶ್ರೀಮಾತೆ ಶಾರದಾದೇವಿಯವರೂ ಒಬ್ಬರು. ತಮ್ಮ ಸುಪುತ್ರ ನರೇನನ ಎಲ್ಲ ಯಶಸ್ಸಿಗೂ ಬೆನ್ನ ಹಿಂದೆ ಪ್ರೋತ್ಸಾಹ ಕೊಟ್ಟ ಮಹಾತಾಯಿ ಅವರು. ಈ ಅಂಶವನ್ನು ಹೃದಯಂಗಮವಾಗಿ, ಶ್ರೀಮಾತೆಯವರ ಮಾತುಗಳಲ್ಲಿಯೇ ವಿವರಿಸಿರುವ ಲೇಖಕಿ ಸಂಸ್ಕೃತ ವಿದ್ವಾಂಸರು. ನಿವೃತ್ತ ಕಾಲೇಜು ಪ್ರಾಂಶುಪಾಲರಾಗಿರುವ ಇವರು ಹಲವು ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಈ ಪತ್ರಿಕೆಯಲ್ಲಿ ಇವರ ಹಲವಾರು ಲೇಖನಗಳು ಪ್ರಕಟವಾಗಿವೆ.**

ಸಕಲ ಜೀವಿಗಳಿಗೆ ತಾಯಿಯಾದ, ತನ್ನನ್ನು ಮೊರೆಹೊಕ್ಕವರಿಗೆ ತಾನು ಎಷ್ಟು ಕಷ್ಟಪಟ್ಟಾದರೂ ಆನಂದವನ್ನು ಕೊಡುವ, ಗುಣಹೀನರನ್ನೂ ತನ್ನ ಮಡಿಲಿಗೆ ತೆಗೆದುಕೊಂಡು ಪಾಲಿಸುವ, ಪೋಷಿಸುವ ಮಹಾಮಾತೆ ಶ್ರೀ ಶಾರದಾದೇವಿಯವರು, ಯೋಗಿಶ್ರೇಷ್ಠರೂ ಅವತಾರವರಿಷ್ಠರೂ ಆದ ಪತಿಯಿಂದಲೇ ಪೂಜಿತಳಾದ ಮಹಾಸಾಧ್ವಿ, ಮಹಾಶಕ್ತಿ ಸ್ವರೂಪಿಣಿ. ಅವರು ಆಧ್ಯಾತ್ಮಿಕ ಜೀವನದಲ್ಲಿ ನಿತ್ಯನೂತನವಾಗಿ ಬೆಳಗುತ್ತಿರುವ ಧ್ರುವತಾರೆ; ಕ್ಷಮೆ, ಕರುಣೆ, ಪರೋಪಕಾರಬುದ್ಧಿ, ಸಮದರ್ಶಿತ್ವ, ಪರಹಿತಾಕಾಂಕ್ಷೆ, ಔದಾರ್ಯ ಮೊದಲಾದ ಗುಣಗಳ ಸಾಕಾರ ಮೂರುತಿ ಶ್ರೀಮಾತೆ.

**ಶ್ರೀರಾಮಕೃಷ್ಣರ ಯಂತ್ರ :** ಶ್ರೀರಾಮಕೃಷ್ಣರು ತಮ್ಮ ಕಾರ್ಯಕ್ಕಾಗಿ ತಮ್ಮೊಡನೆ ಅನೇಕರನ್ನು ಕರೆದುಕೊಂಡುಬಂದರು, ಅವರೆಲ್ಲರನ್ನೂ ಅಂತರಂಗಕ್ಕೆ ಸೇರಿದವರು ಎನ್ನುತ್ತಿದ್ದರು. ಅವರೆಲ್ಲರೂ ಶ್ರೀರಾಮಕೃಷ್ಣರ 'ಚಿರಸಂಗಾತಿಗಳು'. ಅವರಲ್ಲಿ ನರೇಂದ್ರನನ್ನು ಸಪ್ತರ್ಷಿ ಮಂಡಲದಿಂದ ಕರೆದುಕೊಂಡು ಬಂದಿದ್ದರು. "ಸಪ್ತಋಷಿಗಳ ನಡುವೆ ಪ್ರಧಾನರಾದ ಒಬ್ಬ ಋಷಿ ನರೇನ್. ಸಾಧಾರಣಮಂದಿ ಸಾಕಷ್ಟು ಜನ ಹುಟ್ಟುತ್ತಾರೆ, ಸಾಯುತ್ತಾರೆ. ನರೇಂದ್ರನಂತಹ ತುಂಬಾ ಪ್ರಧಾನರಾದವರು ಮಾತ್ರ ಭಗವಂತನ ಕಾರ್ಯಕ್ಕಾಗಿ ಬರುತ್ತಾರೆ" ಎಂದು ಶ್ರೀಮಾತೆ ಶಿಷ್ಯರೊಬ್ಬರಿಗೆ ಹೇಳುತ್ತಾರೆ. " ನರೇನ್ ಶ್ರೀರಾಮಕೃಷ್ಣರ ಯಂತ್ರ, ಅವನು ಅವರ ಕೆಲಸ ಮಾಡಲಿಕ್ಕಾಗಿಯೇ ಇಲ್ಲಿಗೆ ಬಂದುದು" ಎಂದು





ಹೇಳುವ ಶ್ರೀಮಾತೆ, ತಾವು ಕಂಡ ಒಂದು ದೃಶ್ಯವನ್ನು ಹೀಗೆ ತಿಳಿಸುತ್ತಾರೆ: "ಒಂದು ದಿನ ಗಂಗೆಯ ಘಟ್ಟದಲ್ಲಿ ಕುಳಿತಿದ್ದೇನೆ, ಬೆಳದಿಂಗಳ ತಂಪಿನ ಸೌಂದರ್ಯವನ್ನು ಆಸ್ವಾದಿಸುತ್ತಾ, ಮನಸ್ಸು ಹಾಗೆಯೇ ಒಳಮುಖವಾಯಿತು. ಮನಸ್ಸು ಸಮಾಧಿಸ್ಥಿತಿಗೇರಿತು. ಆಗ ಶ್ರೀರಾಮಕೃಷ್ಣರು ಎಲ್ಲಿಂದಲೋ ನನ್ನ ಹಿಂದಿನಿಂದ ಮುಂದಕ್ಕೆ ಬಂದು ಗಂಗೆಗೆ ಇಳಿದರು. ಅವರ ದಿವ್ಯಶರೀರ ಗಂಗೆಯಲ್ಲಿ ಲೀನವಾಯಿತು. ಅಷ್ಟರಲ್ಲಿ ಇದ್ದಕ್ಕಿದಂತೆ ನರೇನ್ ಆ ದೃಶ್ಯದಲ್ಲಿ ಪ್ರಕಟಗೊಂಡ. ಅವನು ಆವೇಶದಿಂದ 'ಜಯ ರಾಮಕೃಷ್ಣ' ಎನ್ನುತ್ತ, ನೆರೆದಿದ್ದ ಜನರ ಮೇಲೆ ಬೊಗಸೆ ಬೊಗಸೆಯಾಗಿ ಗಂಗೆಯ ನೀರನ್ನು ಸಿಂಪಡಿಸಿದ್ದನ್ನು ನಾನು ಕಂಡೆ." ಶ್ರೀರಾಮಕೃಷ್ಣರ ಸಂದೇಶ ಎಂಬ ಗಂಗೆಯನ್ನು ಸ್ವಾಮಿ ವಿವೇಕಾನಂದರು ಎಲ್ಲೆಡೆ ಹರಡುವರು, ಅದನ್ನು ಪಡೆದ ಜನರು ಮುಕ್ತರಾಗುವರು ಎಂಬುದು ಈ ದೃಶ್ಯದ ತತ್ತ್ವ. ಶ್ರೀಮಾತೆ ಹೇಳುತ್ತಾರೆ, ತಾವು ಕಂಡ ಈ ದೃಶ್ಯ ಮುಂದೆ ಸತ್ಯವಾಯಿತು ಎಂದು. ಆದುದರಿಂದಲೇ ಶ್ರೀರಾಮಕೃಷ್ಣರು ನರೇಂದ್ರನಿಗೆ, "ತಾಯಿಯ ಕೆಲಸ ಮಾಡಬೇಕಿದೆ, ಆಗ ನಿನಗೆ ಇವು ಉಪಯೋಗಕ್ಕೆ ಬರುವುದು" ಎಂದು ತಾವು ಪಡೆದ ಎಲ್ಲ ಸಿದ್ಧಿಗಳನ್ನೂ ಕೊಟ್ಟುಬಿಟ್ಟಿದ್ದರು.

**ಆತ್ಮೀಯ ಪುತ್ರನಾಗಿ :** ಶ್ರೀರಾಮಕೃಷ್ಣರು ನರೇಂದ್ರನನ್ನು ತುಂಬಾ ಗಾಢವಾಗಿ ಪ್ರೀತಿಸುತ್ತಿದ್ದರು. ಶ್ರೀರಾಮಕೃಷ್ಣರದೇ ಪ್ರತಿ ಬಿಂಬವಾದ ಶ್ರೀಮಾತೆಗೂ ಈತನಲ್ಲಿ ಅಷ್ಟೇ ಪ್ರೀತಿ. ಶ್ರೀಮಾತೆ ಒಮ್ಮೆ ಯಾದರೂ ಅವರನ್ನು ಬರೀ 'ನರೇನ್' ಎಂದು ಕರೆದುದೇ ಇಲ್ಲ. ಅವರು ಯಾವಾಗಲೂ 'ನನ್ನ ನರೇನ್' ಎಂದೇ ಹೇಳುತ್ತಿದ್ದರು. ಇದು ಸ್ವಾಮಿ ವಿವೇಕಾನಂದರಲ್ಲಿ ಶ್ರೀಮಾತೆಯವರಿಗಿದ್ದ ವಾತ್ಸಲ್ಯಾತಿಶಯವನ್ನು ತೋರಿಸುತ್ತದೆ. 'ನರೇನ್ ದಕ್ಷಿಣೇಶ್ವರಕ್ಕೆ ಬಂದ' ಎಂಬ ಸುದ್ದಿ ಗೊತ್ತಾದರೆ ಸಾಕು, ಶ್ರೀಮಾತೆ ನರೇನ್‌ಗೆ ಇಷ್ಟವಾಗುವಂತಹ ದಪ್ಪ ಚಪಾತಿ, ಗಟ್ಟಿ ತೊವ್ವೆ – ಇಂತಹ ಅಡುಗೆಯನ್ನೇ ತಯಾರು ಮಾಡುತ್ತಿದ್ದರು.

ಶ್ರೀಮಾತೆಯವರಿಗೆ ನರೇಂದ್ರನ ಹಾಡುಗಾರಿಕೆಯೆಂದರೆ ಬಲು ಅಚ್ಚುಮೆಚ್ಚು. "ನನ್ನ ನರೇನ್ ಎಷ್ಟೊಂದು ಮಧುರವಾಗಿ ಹಾಡುತ್ತಾ ಇದ್ದ. ಅವನು ಅಮೇರಿಕಾಗೆ ಹೋಗುವ ಮೊದಲು ಒಬ್ಬರ ಮನೆಯಲ್ಲಿ ನನ್ನ ಮುಂದೆ ಹಾಡಿದ್ದ. ಆ ಹಾಡುಗಳು ಈಗಲೂ ನನ್ನ ಕಿವಿಯಲ್ಲಿ ತುಂಬಿಕೊಂಡಿವೆ" ಎಂದು ಶ್ರೀಮಾತೆ, ಆರತಿಯ ಸಮಯದಲ್ಲಿ ಹಾಡಿದ ಭಜನೆಯೊಂದನ್ನು ಕೇಳಿದಾಗ, ತನ್ನ ಶಿಷ್ಯೆಯ ಬಳಿ ನೆನಪಿಸಿಕೊಳ್ಳುತ್ತಾರೆ.

ನರೇಂದ್ರ ಮಗನಂತೆ ತಮ್ಮ ಜವಾಬ್ದಾರಿಯನ್ನು ಹೊತ್ತು ಕೊಳ್ಳುವ ನಿರ್ಣಯ ಮಾಡಿದ ಘಟನೆಯನ್ನೂ ಅವರು ಹೀಗೆ ನೆನಪಿಸಿಕೊಳ್ಳುತ್ತಾರೆ: "ಶ್ರೀರಾಮಕೃಷ್ಣರ ಆರೈಕೆಗಾಗಿ ಕಾಶೀಪುರದಲ್ಲಿ ಮನೆ ಮಾಡಲಾಗಿತ್ತು. ಅದರ ವೆಚ್ಚವನ್ನು ಅವರ ಗೃಹಸ್ಥಭಕ್ತ ರಾಮಚಂದ್ರ ದತ್ತ ಭರಿಸಿದ್ದನು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರವೂ ಅದೇ ಮನೆಯಲ್ಲೇ ವಾಸ ಮುಂದುವರಿಸುವ ಆಸೆ ನರೇಂದ್ರನದಾಗಿತ್ತು. 'ಭಿಕ್ಷೆ ಬೇಡಿ ತಂದು ನಾನು ಶ್ರೀಮಾತೆಯವರನ್ನು ನೋಡಿಕೊಳ್ಳುತ್ತೇನೆ' ಎಂದು ನರೇಂದ್ರ ತೀರ್ಮಾನಿಸಿದ್ದ " ಎಂದು ಶ್ರೀಮಾತೆ ತಮ್ಮ ಶಿಷ್ಯೆಯ ಬಳಿ ಹೇಳಿಕೊಳ್ಳುತ್ತಾರೆ.

ಶ್ರೀಮಾತೆಯವರ ಜೀವನ ನಿರ್ವಹಣೆಗಾಗಿ ಶ್ರೀರಾಮಕೃಷ್ಣರು, ದೇವಾಲಯದ ವ್ಯವಸ್ಥಾಪಕರು ತಿಂಗಳಿಗೆ ಏಳು ರೂಪಾಯಿಗಳನ್ನು ಅವರಿಗೆ ಕೊಡುವಂತೆ ವ್ಯವಸ್ಥೆ ಮಾಡಿದ್ದರು. ಆದರೆ ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ದೇವಸ್ಥಾನದವರು ಈ ವ್ಯವಸ್ಥೆಯನ್ನು ನಿಲ್ಲಿಸಿಬಿಟ್ಟರು. "ನಮ್ಮವರು ಎನಿಸಿಕೊಂಡವರೆಲ್ಲ ಮನುಷ್ಯಸಹಜ ವಾದ ಸಂಕುಚಿತ ಬುದ್ಧಿಯಿಂದ ಅವರೊಡನೆ ಸೇರಿಕೊಂಡರು. ಆದರೆ ನನ್ನ ನರೇನ್ ಅದನ್ನು ನಿಲ್ಲಿಸಬಾರದೆಂದು ಆಗ್ರಹ ಮಾಡಿದ. ಆದರೂ ಅವರು ನಿಲ್ಲಿಸಿಯೇಬಿಟ್ಟರು" ಎಂದು ಶ್ರೀಮಾತೆ ತಮ್ಮ ಕಷ್ಟದ ದಿನಗಳ ಬಗ್ಗೆ ಶಿಷ್ಯೆಯೊಬ್ಬಳಿಗೆ ಹೇಳುತ್ತಾರೆ.

ದಕ್ಷಿಣೇಶ್ವರದಲ್ಲಿ ಶ್ರೀಮಾತೆಯವರಿಗೆ ರಾತ್ರಿ ಹೊತ್ತು ಕೊಳಲಿನ ಮಂಜುಳನಾದ ಕೇಳುತ್ತಿತ್ತು. ಅದನ್ನು ಕೇಳುತ್ತ, ಮನಸ್ಸು ಭಗವಂತನಲ್ಲಿ ವ್ಯಾಕುಲಗೊಳ್ಳುತ್ತಿತ್ತು. ಹಾಗೆಯೇ ಮೆಲ್ಲನೆ ಅದು ಸಮಾಧಿಸ್ಥಿತಿಗೆ ಏರುತ್ತಿತ್ತು. ಇಂತಹುದೇ ಅನುಭವ ಶ್ರೀಮಾತೆಗೆ ಬೇಲೂರಿನಲ್ಲೂ ಆಗುತ್ತಿತ್ತು. "ಆದುದರಿಂದ ನರೇನ್ ನನಗೆ ಅಲ್ಲಿ ಒಂದು ಮನೆಯನ್ನು ಕಟ್ಟಿಸಲು ಯೋಚಿಸಿದ್ದ. ಎಂಥ ಮಾತೃ ಪ್ರೇಮ ಅವನದು! ಮಾತೃಹೃದಯದೊಡನೆ ಸ್ಪಂದಿಸುವ ಎಂತಹ ಕೋಮಲತೆ!" ಎಂದು ಶ್ರೀಮಾತೆ ಸ್ವಾಮಿ ವಿವೇಕಾನಂದರ ಬಗ್ಗೆ ನೆನಪಿಸಿಕೊಳ್ಳುತ್ತಾರೆ.

ಮಠಕ್ಕಾಗಿ ಜಾಗ ತೆಗೆದುಕೊಂಡ ಮೇಲೆ, ಅಲ್ಲಿಗೆ ಶ್ರೀಮಾತೆ ಯವರನ್ನು ಕರೆದುಕೊಂಡು ಹೋಗಿ, "ಅಮ್ಮ, ಇದೆಲ್ಲಾ ನಿಮ್ಮದೇ, ಇಲ್ಲಿ ನೀವು ಸ್ವೇಚ್ಛೆಯಿಂದ ಓಡಾಡಬಹುದು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಇದಕ್ಕಾಗಿ ಅವರು ಎಷ್ಟು ಕಷ್ಟಪಟ್ಟರು! ಉಪವಾಸ ವನವಾಸಗಳನ್ನು ಅನುಭವಿಸಿದರು! ಬಿಡುವೇ ಇಲ್ಲದೆ ನಿರಂತರ ಹಗಲೂ ರಾತ್ರಿ ಪ್ರವಚನಗಳನ್ನು ಮಾಡಿದರು! ಇಷ್ಟೆಲ್ಲ ಶ್ರಮದಿಂದ ಗಳಿಸಿದುದನ್ನು ಶ್ರೀಮಾತೆಯವರ ಪದತಲದಲ್ಲಿ ಕೃತಜ್ಞತಾ ಪೂರ್ವಕವಾಗಿ ಸಮರ್ಪಣೆ ಮಾಡಿದರು! ಈ ವಿಷಯಗಳನ್ನು ಅನೇಕ ಸಂದರ್ಭಗಳಲ್ಲಿ ಶ್ರೀಮಾತೆಯವರು ತಮ್ಮ ಭಕ್ತರ ಬಳಿ ಹೇಳಿಕೊಳ್ಳುತ್ತಿದ್ದರು.

ಒಂದು ಸಲ ದುರ್ಗಾಪೂಜೆಯ ಸಮಯದಲ್ಲಿ ಸ್ವಾಮಿ ವಿವೇಕಾನಂದರು ತನ್ನ ತಾಯಿ ಭುವನೇಶ್ವರಿ ದೇವಿಯನ್ನು ಬೇಲೂರು ಮಠಕ್ಕೆ ಕರೆತಂದಿರುತ್ತಾರೆ. ಭುವನೇಶ್ವರಿ ದೇವಿಯವರು ಅಲ್ಲೆಲ್ಲಾ ಸ್ವಚ್ಛಂದವಾಗಿ ಓಡಾಡುತ್ತ, "ಇದೆಲ್ಲಾ ನನ್ನ ಮಗ ನರೇನ್ ಮಾಡಿದುದು, ಈ ಬದನೆಕಾಯಿ, ಮೆಣಸಿನಕಾಯಿ ಎಲ್ಲಾ ಬೆಳೆದಿರುವುದು ನನ್ನ ನರೇನ್" ಎಂದು ಹಿಗ್ಗುತ್ತಿರುತ್ತಾರೆ, ಹೆಮ್ಮೆಯಿಂದ ಸುತ್ತುತ್ತಿರುತ್ತಾರೆ. ಆಗ ಸ್ವಾಮಿ ವಿವೇಕಾನಂದರು ಅಲ್ಲಿಗೆ ಬಂದು, "ಅಮ್ಮ ! ಇದೆಲ್ಲಾ ನನ್ನ ನರೇನ್ ಮಾಡಿದ್ದಾನೆ ಎಂದುಕೊಳ್ಳುತ್ತಿದ್ದೀಯಾ ? ಇಲ್ಲ, ಖಂಡಿತಾ ಇಲ್ಲ, ಇದನ್ನೆಲ್ಲಾ ಮಾಡಿ ದವರು ಇವರು" ಎಂದು ಶ್ರೀಮಾತೆಯವರನ್ನು ತೋರಿಸುತ್ತಾರೆ; "ಅವರ ದರ್ಶನ ಮಾಡದೆ ಇಲ್ಲೇನು ಮಾಡುತ್ತಿರುವೆ?" ಎಂದು ಶ್ರೀಮಾತೆಯ ಬಳಿ ತಾಯಿಯನ್ನು ಕರೆದುಕೊಂಡು ಹೋಗುತ್ತಾರೆ. ಸ್ವಾಮಿ ವಿವೇಕಾನಂದರಿಗೆ ಶ್ರೀಮಾತೆಯವರಲ್ಲಿ ಎಂತಹ ಅನನ್ಯ ಭಕ್ತಿ! ಏನು ಗೌರವ ! ಏನು ಆದರ ! ಆಕೆ ಅವರ ಪಾಲಿಗೆ ಸಾಕ್ಷಾತ್ ದುರ್ಗೆ! ಈ ವಿಚಾರಗಳನ್ನು ಶ್ರೀಮಾತೆ ಕೆಲವು ಸಂದರ್ಭಗಳಲ್ಲಿ ತಮ್ಮ ಭಕ್ತರೊಡನೆ ಹಂಚಿಕೊಂಡಿರುವುದನ್ನು, ಅವರ ಭಕ್ತರ ದಿನಚರಿಯ ಪುಟಗಳಲ್ಲಿ ನಾವು ಕಾಣಬಹುದು.